| | | |
|---|---|---|
| 25. | Davanagere sugars | 34984 |
| 26. | Godavari sugars | 90625 |
| 27. | I.S.R | 23025 |
| 28. | I.C.L | 36888 |
| 29. | Mahadeshwara | - |
| 30. | Prabhuligeshwara | 55123 |
| 31. | Renuka sugars Ltd., | 14769 |
| 32. | Siruguppa sugar (Gowribidanur) | - |
| 33. | Siraguppa sugars (Desanur) | 1942 |
| 34. | Sundari sugars | - |
| 35. | Shamnur sugars | 18777 |
| 36. | Ugar sugar | 126128 |
| | Total: | 540907 |
| | Grand Total: | 1220424 |

## ಬಳ್ಳಾರಿ ಜಿಲ್ಲೆಯಲ್ಲಿ ದೇವದಾಸಿಯರ ಪುನರ್‌ವಸತಿ

111(227): ಶ್ರೀ ಸಿರಾಜ್ ಶೇಖ್ (ಕೊಡ್ಲಗಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಪ್ರಶ್ನೆ-

ಅ. ಬಳ್ಳಾರಿ ಜಿಲ್ಲೆಯಲ್ಲಿ ದೇವದಾಸಿಯರ ಪುನರ್ ವಸತಿಗಾಗಿ ಸರ್ಕಾರವು ಕಾರ್ಯಗಳನ್ನೇನಾದರೂ ಹಮ್ಮಿಕೊಂಡಿರುವುದೆ.

ಆ. ಕಳೆದ ಎರಡು ವರ್ಷಗಳಿಂದ ಎಷ್ಟು ದೇವದಾಸಿಯರಿಗೆ ಪುನರ್ ವಸತಿಯನ್ನು ಕಲ್ಪಿಸಿಕೊಡಲಾಗಿದೆ ಹಾಗೂ ಖರ್ಚು ಮಾಡಿರುವ ಹಣವೆಷ್ಟು;

ಇ. ಇದರಲ್ಲಿ ಕೊಡ್ಲಿಗಿ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ದೇವದಾಸಿಯರಿಗೆ ಇಲ್ಲಿಯವರೆಗೆ ಪುನರ್ ವಸತಿಯನ್ನು ಕಲ್ಪಿಸಿಕೊಡಲಾಗಿದೆ.

ಈ. 2002-03ನೇ ಸಾಲಿನಲ್ಲಿ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದಲ್ಲಿ ದೇವದಾಸಿಯರ ಪುನರ್ ವಸತಿಗೆ ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದೆಯೇ?

ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಬಳ್ಳಾರಿ ಜಿಲ್ಲೆಯಲ್ಲಿ ದೇವದಾಸಿಯರ ಪುನರ್ ವಸತಿಗಾಗಿ ನಿಗಮದ ವತಿಯಿಂದ ಈ ಕೆಳಗೆ ತಿಳಿಸಿರುವ ಯೋಜನೆಗಳನ್ನು ಅಮೋಲುಷ್ಠಾನಗೊಳಿಸಲಾಗುತ್ತಿದೆ.

1. ಸ್ವಯಂ ಉದ್ಯೋಗ ಯೋಜನೆ
2. ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ
3. ಮನೆ ಮತ್ತು ಕೊಟ್ಟಿಗೆ ನಿರ್ಮಾಣ
4. ಭೂ ಒಡೆತನ ಯೋಜನೆ.

ಆ. 525 ದೇವಾಸಿಯರಿಗೆ ರೂ. 15.03 ಲಕ್ಷಗಳನ್ನು ವೆಚ್ಚ ಮಾಡಿ ಪುನರ್‌ವಸತಿಯನ್ನು ಕಲ್ಪಿಸಿಕೊಡಲಾಗಿದೆ.

ಇ. ಕೂಡ್ಲಿಗಿ ಕ್ಷೇತ್ರದಲ್ಲಿ 50 ದೇವದಾಸಿ ಫಲಾನುಭವಿಗಳಿಗೆ ಗೃಹಗಳನ್ನು ನಿರ್ಮಾಣ ಮಾಡಿ ದಿ: 10.08.2001ರಲ್ಲಿ ಫಲಾನುಭವಿಗಳ ವಶಕ್ಕೆ ನೀಡಲಾಗಿದೆ. ಸ್ವಯಂ ಉದ್ಯೋಗ ಯೋಜನೆಯಡಿ 4 ಫಲಾನುಭವಿಗಳು ವೈಯಕ್ತಿಕ ಕೊಳವೆ ಯೋಜನೆಯಡಿ 2 ಫಲಾನುಭವಿಗಳು ಹಾಗೂ ಭೂ ಒಡೆತನ ಯೋಜನೆಯಡಿ 4 ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ.

ಈ. 2002-2003ನೇ ಸಾಲಿನಲ್ಲಿ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಲ್ಲಿ ದೇವದಾಸಿ ಮಹಿಳೆಯರಿಗೆ ಪುನರ್‌ವಸತಿ ಕಲ್ಪಿಸಲು ಈ ಕೆಳಗೆ ಕಾಣಿಸಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಸ್ವಯಂ ಉದ್ಯೋಗ ಯೋಜನೆ (ಡೈರಿ) - 07
2. ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ - 02 ಕುಟುಂಬ

ಜಿಂದಾಲ್ ವಿಜಯನಗರ ಉಕ್ಕಿನ ಕಾರ್ಖಾನೆಯಲ್ಲಿನ ಸಿಬ್ಬಂದಿ

112(228): ಶ್ರೀ ಸಿರಾಜ್ ಶೇಖ್ (ಕೂಡ್ಲಿಗಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಬಳ್ಳಾರಿ ಜಿಲ್ಲೆ ತೋರಣಗಲ್ಲು ಜಿಂದಾಲ್ ವಿಜಯನಗರ ಉಕ್ಕಿನ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಶ್ರೇಣಿಯ ಸಿಬಂದಿ ವರ್ಗದವರ ಸಂಖ್ಯೆ ಎಷ್ಟು;

ಆ. ಸದರಿ ಸಿಬ್ಬಂದಿಯಲ್ಲಿ ಕನ್ನಡಿಗರು ಹಾಗೂ ಕನ್ನಡೇತರರ ಸಂಖ್ಯೆ ಎಷ್ಟು;

ಇ. ಈ ಕಾರ್ಖಾನೆಗೋಸ್ಕರ ಸ್ವಾಧೀನಪಡಿಸಿಕೊಂಡಿರುವ ಭೂಮಿಯ ರೈತಾಪಿ ಕುಟುಂಬಗಳೆಷ್ಟು;